ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1574
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಡಾ: ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
4. ಉತ್ತರಿಸಬೇಕಾದ ದಿನಾಂಕ : 24-09-2021

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ರೈತರ ಆದಾಯ, ಜೀವನೋಪಾಯ ಹೆಚ್ಚಿಸಲು ಹಾಗೂ ಅವರ ಉತ್ತಮ ಭವಿಷ್ಯಕ್ಕೆ ಹಾಗೂ ಉನ್ನತ ತಂತ್ರಜ್ಞಾನ ಆಧರಿಸಿ, ತೋಟಗಾರಿಕೆ ಉತ್ಪನ್ನಗಳ ರಫ್ತು ಉತ್ತೇಜಿಸಲು ತೋಟಗಾರಿಕೆ ಇಲಾಖೆಯು ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ; (ವಿವರಗಳನ್ನು ನೀಡುವುದು) | ರಾಜ್ಯದ ರೈತರ ಆದಾಯ, ಜೀವನೋಪಾಯ ಹೆಚ್ಚಿಸಲು ಹಾಗ<br>ಅವರ ಉತ್ತಮ ಭವಿಷ್ಯಕ್ಕೆ ಹಾಗೂ ಉನ್ನತ ತಂತ್ರಜ್ಞಾನ ಆಧರಿ<br>ತೋಟಗಾರಿಕೆ ಉತ್ಪನ್ನಗಳ ರಫ್ತು ಉತ್ತೇಜಿಸಲು ಈ ಕೆಳಕಾಣಿಸಿ<br>ಕ್ರಮಗಳನ್ನು ಕೈಗೊಳ್ಳಲಾಗಿದೆ.<br>ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳು ಸೇರಿದಂತೆ ಕೃ<br>ಉತ್ಪನ್ನಗಳ ರಫ್ತು ಉತ್ತೇಜನ ಮಾಡಲು ಕಪೆಕ್ ಸಂಸ್ಥೆಯನ<br>ಸ್ಥಾಪಿಸಲಾಗಿದೆ.<br>ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ (VTPC<br>ಮೂಲಕ ವಿವಿಧ ಉತ್ಪನ್ನಗಳ ರಫ್ತು ಉತ್ತೇಜನಕ್ಕಾಗಿ ಜಾಗೃ<br>ಶಿಬಿರಗಳನ್ನು, ರಫ್ತು ನಿರ್ವಹಣೆ ಕಾರ್ಯಕ್ರಮಗಳನ<br>ಆಯೋಜಿಸಲಾಗುತ್ತಿದೆ.<br>ರೈತರ ಅನುಕೂಲಕ್ಕಾಗಿ ರಾಜ್ಯದಲ್ಲಿ 159 ಸಂಖ್ಯೆ<br>5.37ಲಕ್ಷ ಮೆ.ಟನ್ ಸಾಮರ್ಥ್ಯ ಹೊಂದಿರುವ ಶಿತಲ ಗೃಹಗಳನ<br>ನಿರ್ಮಿಸಲಾಗಿರುತ್ತದೆ.<br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮತ್ತು ರಾಷ್ಟ್ರೀ<br>ತೋಟಗಾರಿಕೆ ಮಿಷನ್ ಯೋಜನೆಯಡಿ ಸಂಸ್ಕರಣೆ ಮತ<br>ಮೌಲ್ಯವರ್ಧನೆ ಘಟಕಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ.<br>ಅಪೆಡಾ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸುತ್ತಿರು<br>ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಆ) | ತೋಟಗಾರಿಕಾ ಬೆಳೆಗಳಿಗೂ ಬೆಂಬಲ ಬೆಲೆಯನ್ನೂ ರಾಜ್ಯ ಸರ್ಕಾರವು ಘೋಷಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಒದಗಿಸಲಾದ ಬೆಂಬಲಬೆಲೆ ಎಷ್ಟು; (ಮಾಹಿತಿಯನ್ನು ಒದಗಿಸುವುದು) | ಹೌದು, ಮಾಹಿತಿಯು ಈ ಕೆಳಕಂಡಂತಿದೆ.<br>2018-19 ನೇ ಸಾಲಿನಲ್ಲಿ<br>(ಅ) ಕೇಂದ್ರ ಸರ್ಕಾರದಿಂದ FAQ ಗುಣಮಟ್ಟದ ಪ್ರತಿ ಕ್ವಿಂಟಲ<br>ಉಂಡೆ ಕೊಬ್ಬರಿಗೆ ರೂ.9920, ಮತ್ತು ಮಿಲ್ಲಿಂಗ್ ಕೊಬ್ಬರಿ<br>ರೂ. 9521 ಕನಿಷ್ಠ ಬೆಂಬಲ ಬೆಲೆಯನ<br>ನಿಗದಿಪಡಿಸಲಾಗಿರುತ್ತದೆ.<br>(ಆ) ಮಾರುಕಟ್ಟೆಯಲ್ಲಿ ಈರುಳ್ಳಿ ಧಾರ<br>ಕುಸಿತಗೊಂಡಿದ್ದರಿಂದ 'ಬೆಲೆ ಕೊರತೆ ಪಾವತಿ ಯೋಜನೆ' ಅ |

| | | |
|---|---|---|
| | | ಈರುಳ್ಳಿಗೆ ಮೂಲ ಬೆಲೆ ಯಾಗಿ ರೂ.600/ಕ್ವಿಂ. ನಿಗದಿಪಡಿಸಿ ಪ್ರತಿ ಫಲಾನುಭವಿಗೆ ಗರಿಷ್ಟ 75 ಕ್ವಿಂಟಾಲ್ ನಿಗದಿಪಡಿಸಿ ಪ್ರತಿ ಕ್ವಿಂಟಾಲ್ ಗೆ ಗರಿಷ್ಠ ರೂ.200/ ಕ್ವಿಂ. ಗಳಿಗೆ ಮೀರದಂತೆ ಬೆಲೆ ವ್ಯತ್ಯಾಸದ ಮೊತ್ತವನ್ನು ಇ-ಆಧಾರ್ ಮೂಲಕ ಪಾವತಿಸಲಾಗಿರುತ್ತದೆ.<br>(ಇ) ಮಾವಿನ ಬೆಲೆ ಕುಸಿತವಾಗಿದ್ದರಿಂದ ರಾಜ್ಯದ APMCಗಳಲ್ಲಿ ಮಾರಾಟ ಮಾಡಲಾದ ಮಾವಿನ ಹಣ್ಣಿಗೆ ರಾಜ್ಯ ಸರ್ಕಾರವು ಪ್ರತಿ ಕ್ವಿಂಟಾಲ್ ಗೆ ರೂ.750/- ಬೆಂಬಲ ಬೆಲೆ ನಿಗದಿಪಡಿಸಿ ಮಾರಾಟ ಮಾಡಲಾದ ಪ್ರತಿ ಕ್ವಿಂಟಾಲ್ ಮಾವಿಗೆ ಗರಿಷ್ಠ ರೂ. 250/- ರಂತೆ ಗರಿಷ್ಠ 5 ಹೆ. ವಿಸ್ತೀರ್ಣದ ಬೆಳೆಗೆ ಬೆಂಬಲ ಬೆಲೆಯನ್ನು ನೀಡಲಾಗಿರುತ್ತದೆ.<br><br>2. 2019-20 ನೇ ಸಾಲಿಗೆ FAQ ಗುಣಮಟ್ಟದ ಪ್ರತಿ ಕ್ವಿಂಟಲ್ ಉಂಡೆ ಕೊಬ್ಬರಿಗೆ ರೂ.10300, ಮತ್ತು ಮಿಲ್ಲಿಂಗ್ ಕೊಬ್ಬರಿಗೆ ರೂ. 9960 ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗಿರುತ್ತದೆ.<br><br>3. 2020-21 ನೇ ಸಾಲಿಗೆ FAQ ಗುಣಮಟ್ಟದ ಪ್ರತಿ ಕ್ವಿಂಟಲ್ ಉಂಡೆ ಕೊಬ್ಬರಿಗೆ ರೂ.10600, ಮತ್ತು ಮಿಲ್ಲಿಂಗ್ ಕೊಬ್ಬರಿ ರೂ.10335 ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗಿರುತ್ತದೆ. |
| ಇ) | ಬೆಲೆ ಕುಸಿತದಿಂದ ರೈತರು ಎದುರಿಸುತ್ತಿರುವ ಗಂಭೀರ ಸಮಸ್ಯೆಯನ್ನು ಸರ್ಕಾರ ಗಮನಿಸಿದೆಯೇ: ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ಪ್ರತ್ಯೇಕವಾದ ಮಾಹಿತಿಯನ್ನು ಒದಗಿಸುವುದು) | ಗಮನಿಸಿದೆ.<br>ಮಾರುಕಟ್ಟೆಯಲ್ಲಿ ತೋಟಗಾರಿಕೆ ಬೆಳೆಗಳ ದರ ಕುಸಿತವಾ ಸಂದರ್ಭದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯ (MIS) ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿ ಅನುಮೋದನೆಗೊಂಡ ನಂತರ ಯೋಜನೆಯ ನಿಬಂಧನೆಗಳು/ಮಾರ್ಗಸೂಚಿಗಳನ್ವಯ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br>2018-19 ನೇ ಸಾಲಿನಲ್ಲಿ ಈರುಳ್ಳಿ ಮತ್ತು ಮಾವು ಬೆಳೆಗ ಮಾರುಕಟ್ಟೆ ಧಾರಣೆ ಕುಸಿತಗೊಂಡಾಗ ಬೆಲೆ ಕೊರತೆ ಪಾವ ಯೋಜನೆಯಡಿ ಖರೀದಿಸಲಾಗಿರುತ್ತದೆ.<br>ಮಾರುಕಟ್ಟೆ ಧಾರಣೆ ಕುಸಿತಗೊಂಡ ಹಿನ್ನಲೆಯಲ್ಲಿ 2019-2 ನೇ ಸಾಲಿನಲ್ಲಿ ಉಂಡೆ ಕೊಬ್ಬರಿಯನ್ನು ಕನಿಷ್ಠ ಬೆಂಬಲ ಬೆ ಯೋಜನೆಯಡಿ ಖರೀದಿಸಲಾಗಿರುತ್ತದೆ. |

| | | |
|---|---|---|
| | | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಮಾರುಕಟ್ಟೆ ಮೂಲಭೂತ ಸೌಕರ್ಯ ನಿರ್ಮಾಣ ಮಾಡಲು ಚಿಲ್ಲರೆ ಮಾರುಕಟ್ಟೆ, ಸಗಟು ಮಾರುಕಟ್ಟೆ ಮತ್ತು ಗ್ರಾಮೀಣ ಮಾರುಕಟ್ಟೆ ನಿರ್ಮಾಣ ಕಾರ್ಯಕ್ರಮಗಳಿಗೆ ಸಹಾಯಧನ ಕಲ್ಪಿಸಲಾಗುತ್ತಿದೆ.<br>ರೈತರ ಅನುಕೂಲಕ್ಕಾಗಿ ರಾಜ್ಯದಲ್ಲಿ 159 ಸಂಖ್ಯೆಯ 5.37ಲಕ್ಷಮೆ.ಟನ್ ಸಾಮರ್ಥ್ಯ ಹೊಂದಿರುವ ಶೀತಲ ಗೃಹಗಳನ್ನು ನಿರ್ಮಿಸಲಾಗಿರುತ್ತದೆ. |
| ಈ) | ಸರ್ಕಾರವು ತೋಟಗಾರಿಕೆ ಬೆಳೆಗಳ ಗುಣಮಟ್ಟ, ಸಾಗಾಣಿಕೆ, ಮಾರುಕಟ್ಟೆ ಮತ್ತು ರಫ್ತು ನಿರ್ವಹಣೆ ಸುಧಾರಣೆಗಳ ಕುರಿತಾಗಿ ದೀರ್ಘಾವಧಿ ಯೋಜನೆಗಳನ್ನು ಹಮ್ಮಿಕೊಂಡಿದೆಯೇ; ಹಾಗಿದ್ದಲ್ಲಿ, ಈ ಕುರಿತಾದ ವಿವರಗಳನ್ನು ಒದಗಿಸುವುದು | ಸರ್ಕಾರವು ತೋಟಗಾರಿಕೆ ಬೆಳೆಗಳ ಗುಣಮಟ್ಟ, ಸಾಗಾಣಿಕೆ ಮಾರುಕಟ್ಟೆ ಮತ್ತು ರಫ್ತು ನಿರ್ವಹಣೆ ಸುಧಾರಣೆಗಳ ಕುರಿತಾಗಿ ದೀರ್ಘಾವಧಿ ಯೋಜನೆಗಳನ್ನು ಹಮ್ಮಿಕೊಂಡಿದೆ. ವಿವರಗಳು ಕೆಳಕಂಡಂತಿವೆ.<br>ತೋಟಗಾರಿಕೆ ಇಲಾಖೆಯ ಯೋಜನೆಗಳಾದ ಸಮಗ್ರ ತೋಟಗಾರಿಕೆ ಅಭಿವೃದ್ಧಿ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ ಯೋಜನೆಗಳ ಮೂಲಕ ತೋಟಗಾರಿ ಬೆಳೆಗಳ ಗುಣಮಟ್ಟ, ಸಾಗಾಣಿಕೆ, ಮಾರುಕಟ್ಟೆಗಳಿಗೆ ಉತ್ತೇಜನ ನೀಡಲಾಗುತ್ತದೆ.<br>ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಕೃಷಿ ರಫ್ತು ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಕೆಪೆಕ್ ಸಂಸ್ಥೆಯನ್ನು ರಾಜ ನೋಡಲ್ ಏಜೆನ್ಸಿಯನ್ನಾಗಿ ನೇಮಿಸಿದ್ದು, ದಾಳಿಂಬೆ ಬೆಂಗಳೂರು ಗುಲಾಬಿ ಈರುಳ್ಳಿ, ಅರಿಶಿಣ; ಕರಿಮೆಣಸು, ಗರ್ಕಿನ್ ಮತ್ತು ಕಾಫಿ ಉತ್ಪನ್ನಗಳ ರಫ್ತನ್ನು ಹೆಚ್ಚಿಸಲು ಕೃಷಿ ರಫ್ತ ವಲಯಗಳನ್ನು ಗುರುತಿಸಿ ರೂ.886 ಕೋಟಿಗಳಿಗೆ ಕ್ರಿಯ ಯೋಜನೆಯನ್ನು ಕೆಪೆಕ್ ಸಂಸ್ಥೆಯು ಕೇಂದ್ರ ಸರ್ಕಾರ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. |

| | | |
|---|---|---|
| ಉ) | ತೋಟಗಾರಿಕೆ ಅಭಿವೃದ್ಧಿ ಕುರಿತಾದ ಕೇಂದ್ರ ಸರ್ಕಾರದ ಯೋಜನೆಗಳಾವುವು; ಈ ಯೋಜನೆಗಳಿಗೆ ಒದಗಿಸಲಾದ ಅನುದಾನ ಎಷ್ಟು? (ಮಾಹಿತಿ ಒದಗಿಸುವುದು) | 2021-22ನೇ ಸಾಲಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳು ಹಾಗೂ ಸದರಿ ಯೋಜನೆಗಳಿಗೆ ಒದಗಿಸಲಾಗಿರುವ ಅನುದಾನದ ವಿವರವು ಈ ಕೆಳಗಿನಂತಿದೆ; |

| ಕ್ರ. ಸಂ | ಯೋಜನೆಗಳು | ಸಂಪುಟ-3 ರಂತೆ ವಾರ್ಷಿಕ ಗುರಿ (ರೂ.ಲಕ್ಷಗಳಲ್ಲಿ) |
|---|---|---|
| 1 | ಪಿಎಂಕೆಎಸ್ ವೈ- ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ | 45000.00 |
| 2 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 14783.00 |
| 3 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ | 1596.00 |
| 4 | ಸಾಮರ್ಥ್ಯವಯುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ ಯೋಜನೆ | 973.00 |
| 5 | ಪರಂಪರಾಗತ ಕೃಷಿ ವಿಕಾಸ ಯೋಜನೆ | 680.00 |
| | ಒಟ್ಟು | 63032.00 |

No.HORTI 441 HGM 2021

(ಮುನಿರತ್ನ)

ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

LCQ-1574

# ಅನುಬಂಧ

## ಅಪೆಡಾ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು

| ಕ್ರ.ಸಂ | ಯೋಜನೆ | ಸಹಾಯಧನ |
|---|---|---|
| ಅ | ಗುಣಮಟ್ಟ ಮತ್ತು ಗುಣಮಟ್ಟ ನಿಯಂತ್ರಣ ಉತ್ತೇಜನ | |
| | 1. ಗುಣಮಟ್ಟದ ಪರೀಕ್ಷಾ ಸಲಕರಣೆಗಳನ್ನು ಸ್ಥಾಪಿಸಲು ಸಹಾಯ | ಶೇ. 50 ರಷ್ಟು ಗರಿಷ್ಟ ರೂ.25.00 ಲಕ್ಷಗಳು ಪ್ರತಿ ಫಲಾನುಭವಿಗೆ |
| | 2. ಗುಣಮಟ್ಟ ನಿರ್ವಹಣೆ, ಗುಣಮಟ್ಟ ನಿಯಂತ್ರಣ ವ್ಯವಸ್ಥೆ, ಗುಣಮಟ್ಟದ ಭರವಸೆಗಳಾದ ISO ಸರಣಿ, HACCP, BRC, GAP, ಮುಂತಾದ ಸುಧಾರಣೆ ಮತ್ತು ಪ್ರಮಾಣೀಕರಣ ಇತ್ಯಾದಿ ಸೇರಿದಂತೆ ISO ಸರಣಿ, HACCP, BRC, GAP, ಮುಂತಾದ ವ್ಯವಸ್ಥೆಗಳನ್ನು ಸ್ಥಾಪಿಸಲು ಹಾಗೂ ಧೃಢೀಕರಣ ಇತ್ಯಾದಿಗಳಿಗೆ ಸಹಾಯ | ಶೇ. 50 ರಷ್ಟು ಗರಿಷ್ಟ ರೂ.5.00 ಲಕ್ಷಗಳು ಪ್ರತಿ ಫಲಾನುಭವಿಗೆ |
| | 3. ಗುಣಮಟ್ಟದ ಖಾತರಿ ಕೈಪಿಡಿಗಳು, ಮಾರ್ಗಸೂಚಿಗಳು, ದಾಖಲೆಗಳು, ಮಾನದಂಡಗಳು, ರಫ್ತು ಪರೀಕ್ಷೆಗೆ ಲ್ಯಾಬ್‌ಗಳನ್ನು ಉನ್ನತೀಕರಿಸುವುದು ಮತ್ತು ಗುರುತಿಸುವುದು, ರಫ್ತುದಾರರನ್ನು ಪ್ರೀಮಿಯಂ ಗುಣಮಟ್ಟದ ರಫ್ತುದಾರರೆಂದು ಪ್ರಮಾಣೀಕರಿಸುವುದು ಇತ್ಯಾದಿ ಕೀಟನಾಶಕ ನಿರ್ವಹಣಾ ಕಾರ್ಯಕ್ರಮ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಮಾಣೀಕರಣ ಚಟುವಟಿಕೆಗಳು | ಶೇ. 100 ರಷ್ಟು ಅಪೆಡಾ ಸಂಸ್ಥೆಗೆ |
| | 4.APEDA ದಿಂದ ರಫ್ತು ಪರೀಕ್ಷೆಗಾಗಿ ಮಾನ್ಯತೆ ಪಡೆದ ಪ್ರಯೋಗಾಲಯಗಳ ಉನ್ನತೀಕರಣ . | ಶೇ. 50 ರಷ್ಟು ಖಾಸಗಿಪ್ರಯೋಗಾಲಯಗಳಿಗೆ,<br>ಶೇ. 75 ರಷ್ಟು ರಾಜ್ಯ ಸರ್ಕಾರ/ ವಿಶ್ವವಿದ್ಯಾಲಯಗಳ ಪ್ರಯೋಗಾಲಯಗಳಿಗೆ,<br>ಶೇ. 100 ರಷ್ಟು ಕೇಂದ್ರ ಸರ್ಕಾರ/ ಸರ್ಕಾರಿ ಪ್ರಯೋಗಾಲಯಗಳಿಗೆ.<br>ಗರಿಷ್ಟ ರೂ.75.00 ಲಕ್ಷಗಳು |
| | 5.ಕೃಷಿ ಉತ್ಪನ್ನಗಳು/ ಉತ್ಪನ್ನಗಳಲ್ಲಿ ಭಾರಿಲೋಹ ಕಲ್ಮಶಗಳು, ಎಲ್ಲಾ ಹಣ್ಣುಗಳು ಮತ್ತು ತರಕಾರಿಗಳು, ಸಂಸ್ಕರಿಸಿದ ಹಣ್ಣುಗಳು ಮತ್ತು ತರಕಾರಿಗಳು, ಇತರ ಸಂಸ್ಕರಿಸಿದ ಉತ್ಪನ್ನಗಳು, ಹೂವಿನ ಕೃಷಿ, ಪ್ರಾಣಿ ಉತ್ಪನ್ನಗಳು, ಧಾನ್ಯಗಳು ಇತ್ಯಾದಿ ಸೇರಿದಂತೆ ಕೃಷಿ ಉತ್ಪನ್ನಗಳಲ್ಲಿ ನೀರು, ಮಣ್ಣು, ಕೀಟನಾಶಕದ ಶೇಷ ವಿಶ್ಲೇಷಣೆ, ,ಪಶುವೈದ್ಯಕೀಯ ಔಷಧಗಳು, ಹಾರ್ಮೋನುಗಳು, ಜೀವಾಣುಗಳ ವಿಶ್ಲೇಷಣೆ | ಘಟಕ ವೆಚ್ಚದ ಶೇ. 50 ರಷ್ಟು, ಗರಿಷ್ಟ ರೂ.5000.00 ಪ್ರತಿ ಮಾದರಿಗೆ |
| | 6.ಪತ್ತೆಹಚ್ಚುವಿಕೆಗಾಗಿ ಜಾಗತಿಕ ಮಾನದಂಡಗಳನ್ನು ಅಳವಡಿಸಿಕೊಳ್ಳಲು ಬೆಂಬಲ | |
| | a) ಜಿಸಿಪಿ (GCP) ನೋಂದಣಿ | ಶುಲ್ಕದ ಶೇ. 25 ರಷ್ಟು, ಗರಿಷ್ಟ ರೂ.1.00 ಲಕ್ಷ ಪ್ರತಿ ಫಲಾನುಭವಿಗೆ |
| | b) ಎಲೆಕ್ಟ್ರಾನಿಕ್ ಉತ್ಪನ್ನ ಕೋಡ್ (EPC/RFID) ಗಾಗಿ ನೋಂದಣಿ | ಶುಲ್ಕದ ಶೇ. 25 ರಷ್ಟು, ಗರಿಷ್ಟ ರೂ.1.00 ಲಕ್ಷ ಪ್ರತಿ ಫಲಾನುಭವಿಗೆ |
| | c) ರೈತ ಕ್ಲಸ್ಟರ್‌ಗಳಿಗೆ ಜಿಎಪಿಗಾಗಿ ನೋಂದಣಿ/ (ಆಂತರಿಕ ನಿಯಂತ್ರಣ ವ್ಯವಸ್ಥೆ) ಐಸಿಎಸ್ | ಒಟ್ಟು ವೆಚ್ಚದ ಶೇ. 25 ರಷ್ಟು, ಗರಿಷ್ಟ ರೂ.1.5 ಲಕ್ಷ ಪ್ರತಿ ಐಸಿಎಸ್ ಗೆ |
| | d) ಕೃಷಿ ಮಟ್ಟದ ಬಾಹ್ಯ ನಿರ್ದೇಶಾಂಕಗಳನ್ನು ಸೆರೆಹಿಡಿಯಲು ಸಲಕರಣೆಗಳ ಸಂಗ್ರಹಣೆ | ಸಲಕರಣೆ ವೆಚ್ಚದ ಶೇ. 25 ರಷ್ಟು, ಗರಿಷ್ಟ ರೂ.2.5 ಲಕ್ಷ |
| | 7. APEDA ಅಥವಾ ಯಾವುದೇ ಇತರ ಸರ್ಕಾರಿ ಅಥವಾ ಸಾರ್ವಜನಿಕ ವಲಯದ ಏಜೆನ್ಸಿಯಿಂದ ಪ್ರಯೋಗಾಲಯಗಳ ಸ್ಥಾಪನೆ/ಉನ್ನತೀಕರಣ/ವಿಸ್ತರಣೆ | ಶೇ. 100 ರಷ್ಟು, grant in aid |
| ಆ | ಸಾಮರ್ಥ್ಯ ನಿರ್ಮಾಣ ಮತ್ತು ಸಂಸ್ಥೆಯ ನಿರ್ವಹಣೆ | |
| | 1.ತಾಂತ್ರಿಕ ಮತ್ತು ನಿರ್ವಹಣಾ ಕೌಶಲ್ಯಗಳ ಉನ್ನತೀಕರಣಕ್ಕೆ ಭಾರತ/ವಿದೇಶಗಳಲ್ಲಿ ಆನ್ ಸ್ಪಾಟ್ ಟ್ರೇನಿಂಗ್ ಮೂಲಕ ನೆರವು | 1. ಶೇ. 100 ರಷ್ಟು ಅಪೆಡಾ ಸಂಸ್ಥೆಗೆ, ಗರಿಷ್ಟ ರೂ.1.5 ಲಕ್ಷ.<br>2. ಶೇ. 100 ರಷ್ಟು ರಫ್ತು ಆಧಾರಿತ ಉತ್ಪಾದನೆಗಾಗಿ ಗುರುತಿಸಿರುವ ರೈತ ಗುಚ್ಛಗಳಿಗೆ |
| | 2. ರಫ್ತು ಅಭಿವೃದ್ಧಿಗಾಗಿ ಭಾರತದ ರಫ್ತುದಾರರ ಸಿಬ್ಬಂದಿಯ ತಾಂತ್ರಿಕ ಕೌಶಲ್ಯ ಉನ್ನತೀಕರಣಕ್ಕೆ ನೆರವು | ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಲ್ಲಿ ಪ್ರತಿ ತರಬೇತಿಗೆ ಪ್ರತಿ ಸಿಬ್ಬಂದಿಗೆ INR 20,000 (ವರ್ಷಕ್ಕೆ ಒಂದೇ ಸಂಸ್ಥೆಯಿಂದ 5 ಕ್ಕಿಂತ ಹೆಚ್ಚಿಲ್ಲ).<br>ಸಹಾಯವು ಪ್ರತಿ ಸಿಬ್ಬಂದಿಗೆ ದಿನಕ್ಕೆ ಸರಾಸರಿ ರೂ 5000 ವೆಚ್ಚಕ್ಕೆ ಸೀಮಿತವಾಗಿರುತ್ತದೆ.<br>ಶೇ. 100 ರಷ್ಟು APEDA ಪ್ರತಿನಿಧಿಗಳಿಗೆ |

| | | |
|---|---|---|
| | 3. ದೇಶದೊಳಗೆ ಅಧ್ಯಯನ ಪ್ರವಾಸ, ಸೆಮಿನಾರ್‌ಗಳು/ಗುಂಪು ಚಟುವಟಿಕೆಗಳನ್ನು ಆಯೋಜಿಸಲು ಸಹಾಯ | ಒಟ್ಟು ವೆಚ್ಚದ ಶೇ. 50 ರಷ್ಟು,<br>ಗರಿಷ್ಟ ರೂ.1.00 ಲಕ್ಷ ರಾಷ್ಟ್ರೀಯ ಸೆಮಿನಾರ್‌ಗೆ.<br>ಗರಿಷ್ಟ ರೂ.2.00 ಲಕ್ಷಅಂತಾರಾಷ್ಟ್ರೀಯ ಸೆಮಿನಾರ್‌ಗೆ |
| | 4. APEDA ನಿಂದ ಆಯೋಜಿಸದ ಸೆಮಿನಾರ್ | ಶೇ. 100 ರಷ್ಟು |
| | 5. APEDA ಪ್ರಾಯೋಜಿಸಿದ ಸೆಮಿನಾರ್ | ಒಟ್ಟು ವೆಚ್ಚದ ಶೇ. 50 ರಷ್ಟು, ಗರಿಷ್ಟ ರೂ.5.00 ಲಕ್ಷ. |
| | 6. APEDA ಮತ್ತು ರಫ್ತುದಾರರ ಸಂಘದಿಂದ ಪ್ರಾಯೋಜಿತ ಅಥವಾ ಸಂಘಟಿತ ಅಂತಾರಾಷ್ಟ್ರೀಯ ಅಧ್ಯಯನ ಪ್ರವಾಸಕ್ಕೆ ಸಹಾಯ ಕಾರ್ಯಕ್ರಮ | ಶೇ. 100 ರಷ್ಟು APEDA ಪ್ರಾಯೋಜಿತ ಚಟುವಟಿಕೆಗಳಿಗೆ ಮಾತ್ರ |
| | 7. ರಫ್ತು ಹೆಚ್ಚಿಸಲು ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ | ಶೇ. 100 ರಷ್ಟು APEDA ಯಿಂದ ICAR ಸಂಸ್ಥೆಗಳು ಅಥವಾ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಮೂಲಕ |